ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,

ಶ್ರೀರಂಗಪಟ್ಟಣ

ಸಿ.ಸಿ.5/2023

| | |
|---|---|
| ಸಿ.ಡಬ್ಲ್ಯೂ ಃ | 1 |
| ಪಿ.ಡಬ್ಲ್ಯೂ ಃ | 1 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಚೈತನ್ಯ |
| ತಂದೆ/ ಪತಿಯ ಹೆಸರು | ಃ | ಅವಿನಾಶ್ |
| ವಯಸ್ಸು | ಃ | 30 ವರ್ಷ |
| ವೃತ್ತಿ | ಃ | ಮನೆ ಕೆಲಸ |
| ವಾಸ | ಃ | ಪಂಪ್ ಹೌಸ್ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 04.02.2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ಚಾಸಾ.2 ಮತ್ತು 3 ರವರು ನನ್ನ ತಂದೆ ತಾಯಿ ಇರುತ್ತಾರೆ. ನನಗೆ ಚಾಸಾ.4 ರಿಂದ 7 ರವರ ಪರಿಚಯ ಇರುವುದಿಲ್ಲ. ನನ್ನ ಹಾಗೂ ಆರೋಪಿ ನಡುವೆ ಸಣ್ಣ ಪುಟ್ಟ ಮನಸ್ತಾಪ ಇದ್ದು ನಾನು ಪೊಲೀಸ್ ಠಾಣೆಗೆ ಹೋಗಿ ಮಾಹಿತಿಯನ್ನು ನೀಡಿರುತ್ತೇನೆ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ದಿಃ 16.11.2022 ರಂದು ಬೆಳಗ್ಗೆ 8 ಗಂಟೆ ಸಮಯದಲ್ಲಿ ನಾನು ಮೈಸೂರಿಗೆ ಹೋಗಲೆಂದು ನಮ್ಮ ಮನೆಯ ಬೀರುವಿನಲ್ಲಿ ಇಟ್ಟಿದ್ದ ಒಡವೆಗಳನ್ನು ತೆಗೆದುಕೊಳ್ಳಲು ಹೋದಾಗ ಅವುಗಳು ಅಲ್ಲಿ ಇರಲಿಲ್ಲ. ನಾವು ಪ್ರವಾಸಕ್ಕೆ ಹೋಗಿದ್ದ ಸಮಯದಲ್ಲಿ ನಮ್ಮ ಮನೆಯಲ್ಲಿ ಕಳ್ಳತನ ಆಗಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿ. ಆರೋಪಿಯೇ ಈ ಕಳ್ಳತನ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಮಹಜರ್ ಅನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಅಭಿಯೋಜನೆಯ ಪರವಾಗಿ ನಿಪಿ.2 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈ ಘಟನೆ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆ ನೀಡಿಲ್ಲ ಎಂದು ತಿಳಿಸಿದ್ದರಿಂದ ಸಾಕ್ಷಿಯ ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಪಿ.3 ಎಂದು , ಅದರಲ್ಲಿರುವ ಆಯ್ದ ಭಾಗವನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.